ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

<u>ಸಿ.ಸಿ. ಸಂಖ್ಯೆ: 118/2023</u>

ಫಿರ್ಯಾದಿದಾರರು: ಸರ್ಕಾರದ ಪರ ಹುಣಸೂರು ಗ್ರಾಮಾಂತರ
ಪೊಲೀಸ್ ಠಾಣೆ, ಹುಣಸೂರು,
ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು ಮಹದೇವಯ್ಯ @ ರವಿಚಂದ್ರು
ಬಿನ್ ಲೇಟ್, ವೀರಭದ್ರಯ್ಯ,
ಸುಮಾರು 30 ವರ್ಷ ವಯಸ್ಸು,
ವಾಸ: ಹಬ್ಬನಕುಪ್ಪೆ ಗ್ರಾಮ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ

<u>ದೋಷಾರೋಪಣೆ</u>

ಶ್ರೀ ಮನು ಪಟೇಲ್ ಬಿ.ವೈ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ದಿನಾಂಕ : 11-03-2007 ನೇ ಭಾನುವಾರ ಮೈಸೂರು ಮನೆ ನಂ.113, 1 ನೇ ಮುಖ್ಯ ರಸ್ತೆ, 2 ನೇ ಅಡ್ಡರಸ್ತೆ, ಮಹದೇಶ್ವರ ಬಡಾವಣೆಯಲ್ಲಿ ವಾಸವಿರುವ ಎಂ.ಸರಿತಾ ಸಾಕ್ಷಿ-1 ಎಂಬುವವರನ್ನು ಕೆ.ಆರ್.ಎಸ್. ರಸ್ತೆಯಲ್ಲಿರುವ ಕಾಮಧೇನು ಕಲ್ಯಾಣ ಮಂಟಪದಲ್ಲಿ ಹುಣಸೂರು ತಾಲ್ಲೂಕು ಹಬ್ಬನಕುಪ್ಪೆ ಗ್ರಾಮದ ವೀರಭದ್ರಯ್ಯನ ಮಗನಾದ ಆರೋಪಿ ಮಹದೇವಯ್ಯ @ ರವಿಚಂದ್ರು ಎಂಬುವವನೊಂದಿಗೆ ಮದುವೆಮಾಡಿಕೊಟ್ಟಿದ್ದು 4 ವರ್ಷಗಳ ಕಾಲ ಗಂಡ - ಹೆಂಡತಿ ಹಬ್ಬನಕುಪ್ಪೆ ಗ್ರಾಮದ ಗಂಡನ ಮನೆಯಲ್ಲಿ ಅತ್ತೆ, ಅತ್ತಿಗೆ, ನಾದನಿಯರೊಂದಿಗೆ ವಾಸವಿದ್ದಾಗ ಇವರ ದಾಂಪತ್ಯ ಜೀವನದಲ್ಲಿ 2 ವರ್ಷದ ಪ್ರಗತಿ ಎಂಬ ಹೆಣ್ಣು ಮಗು ಇರುತ್ತದೆ. ಸಾಕ್ಷಿ-1 ರವರು ಬಾಣಂತನಕ್ಕೆ

ಹೋಗಿದ್ದು 9 ತಿಂಗಳು ಕಳೆದ ನಂತರ ಆರೋಪಿ ರವರು ಸಾಕ್ಷಿ-1 ರವರನ್ನು ಹಬ್ಬನಕುಪ್ಪೆ ಗ್ರಾಮಕ್ಕೆ ಕರೆದುಕೊಂಡು ಬಂದು ನೀನು ನಿನ್ನ ತಂದೆ ಮನೆಯಿಂದ ಏನು ತಂದಿರುವುದಿಲ್ಲ ಚಿನ್ನ ಮತ್ತು ಹಣವನ್ನು ತೆಗೆದುಕೊಂಡು ಬಾ ಎಂದು ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ, ಕಿರುಕುಳ ನೀಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆರೋಪಣೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆರೋಪಣೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

(ಮನು ಪಟೇಲ್ ಬಿ.ವೈ.)

ದಿನಾಂಕ: 30.12.2023

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಂ.ದಂ.ನ್ಯಾಂ.ದಂಡಾಧಿಕಾರಿಗಳು, ಹುಣಸೂರು.